ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1261/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಭೀರಪ್ಪ** | | |
| **ತಂದೆಃಹೆಸರು** | **ಕರಿಯಪ್ಪ** | **ಪಿಡಬ್ಲೂಃ** | **7** |
| **ವಯಸ್ಸು** | **32 ವರ್ಷ** | **ಸಿಡಬ್ಲೂಃ** | **10** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಬೆಳಗುರ್ಕಿ** | | |

**ದಿನಾಂಕ 10-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಬೆಳಗುರ್ಕಿ ಗ್ರಾಮದಲ್ಲಿ ಚಾಸಾ-1 ರವರ ಮನೆಯ ಬಳಿ ಪಂಚನಾಮೆ ಮ.3 ರಿಂದ 4 ಗಂಟೆಯವರೆಗೆ ಮಾಡಿದ್ದರು. ದಿನಾಂಕ, ವರ್ಷ ನನಗೆ ಗೊತ್ತಿಲ್ಲ. ಜಗಳ ಆಡಿದಾಗ ಇದ್ದಿರಿ ಎಂದು ಓದಿ ಹೇಳಿದ್ದರು.

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋದಲ್ಲಿರುವ ತಮ್ಮ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿ.08-02-2024 ರಂದು ಸಂ.5 ರಿಂದ 6 ರ ಗಂಟೆಯವರೆಗೆ ಚಾಸಾ-1 ರವರು ಜಗಳವಾದ ಸ್ಥಳವನ್ನು ತೋರಿಸಿದಂತೆ ನಿಪಿ-2 ರಂತೆ ಪಂಚನಾಮೆ ಮಾಡಿ, ನಿಪಿ-3 ನ್ನು ತೆಗೆದಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಘಟನೆ ನಡೆದ ದಿನಾಂಕ ನನಗೆ ನೆನಪಿಲ್ಲ. ಘಟನೆ ನಡೆದಾಗ ನಾನು ನೋಡಲು ಹೋಗಿದ್ದೆ.

2. ನಿಮಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಪೋಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದಿರಿ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಕುಲಸ್ಥರಿರುವುದರಿಂದ, ಅವರು ಹೇಳಿಕೊಟ್ಟಂತೆ ನೀವು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ನಿಪಿ-2 ಕ್ಕೆ ಸಹಿಯನ್ನು ಘಟನೆಯಾದ 5-6 ದಿನಗಳ ನಂತರ ಮಾಡಿದ್ದೆ. ನಿಪಿ-2 ರಲ್ಲಿರುವ ಸಂಗತಿಗಳನ್ನು ನನಗೆ ಹೇಳಲು ಆಗುವುದಿಲ್ಲ. ನಿಪಿ-2 ರಲ್ಲಿ ಜಗಳದ ಕಾಲಕ್ಕೆ ನೀವು ಇದ್ದ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನೀವು ಠಾಣೆಯಲ್ಲಿ ಸಹಿ ಮಾಡಿದ್ದೀರಿ, ನಿಮಗೆ ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ.

4. ಈ ದಿನ ಚಾಸಾ-1 ರವರು ಕೋರ್ಟಿಗೆ ಹೋಗು ಎಂದು ಹೇಳಿದ್ದರಿಂದ ಬಂದಿದ್ದೇನೆ. ನಿಮಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

5. ಚಾಸಾ-1 ರವರ ಪ್ರಕರಣಕ್ಕೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**